ಶ್ರೀ ತನ್ವೀರ್ ಸೇಠ್:– ಇಲ್ಲ 2005 ರಲ್ಲಿ ಜಾರಿಗೊಳಿಸಿ ಅದಕ್ಕೆ ನಿಯಮಾವಳಿಗಳನ್ನು 2007 ರಲ್ಲಿ ಮಾಡಿದೆವು. ಅಸಂಘಟಿತ ವಯದ ಕಾರ್ಮಿಕರ ವಿಚಾರದಲ್ಲಿ ರಾಜ್ಯ ಸರ್ಕಾರದಲ್ಲಿ ಅನೇಕ ವರದಿಗಳು ಬಂದಿವೆ. Select Committee ಗೂ House Committee ಗೂ ಇದನ್ನು ಕಳುಹಿಸಿದ್ದೆವು, ಅದರಲ್ಲಿ ನಾವೇನು ಮಾಡಿಲ್ಲ. ಹೀಗಾಗಿ ರಾಷ್ಟ್ರ ವ್ಯಾಪ್ತಿಯಲ್ಲಿ ಶೇಕಡ 80 ರಷ್ಟು ಅಸಂಘಟಿತ ವಲಯ ಏನಿದೆ ಅದರ ಕಡೆ ಮಾನ್ಯ ವಿರೋಧ ಪಕ್ಷದ ನಾಯಕರು ಗಮನ ಸೆಳೆದರು. ಕಾರ್ಮಿಕ ಇಲಾಖೆ ಈ ವಿಚಾರದಲ್ಲಿ ಬಹಳ ಮಹತ್ವವಾಗಿ ಕೆಲಸ ಮಾಡಬೇಕಾಗುತ್ತದೆ. ಅದನ್ನು ಮಾಡುವಂಥದ್ದಕ್ಕೆ ಸಲಹೆ ಕೊಡುವುದಕ್ಕೆ ನಾವು ಎಲ್ಲಾ ನಿಮ್ಮ ಜೊತೆಗೆ ನಿಲ್ಲುತ್ತೇವೆ.

ಶ್ರೀ ಪಿ.ಟಿ. ಪರಮೇಶ್ವರನಾಯ್ಕ:– ಅಸಂಘಟಿತ ಕಾರ್ಮಿಕರಲ್ಲಿ 43 ವರ್ಗಗಳನ್ನು ಗುರುತಿಸಿ ಅಸಂಘಟಿತ ಕಾರ್ಮಿಕರ ಪಟ್ಟಿಯನ್ನು ಮಾಡಿದ್ದೇವೆ. ಮಾನ್ಯ ತನ್ವೀರ್ ಸೇಠ್ ರವರು ಹಿಂದೆ ಕಾರ್ಮಿಕ ಸಚಿವರಾಗಿ ಕೆಲಸ ಮಾಡಿದ್ದಾರೆ. ನಾನು ಈ ಬಗ್ಗೆ ಚರ್ಚೆ ಮಾಡುವಾಗ ಅವರನ್ನೂ ಕೂಡ ಆಹ್ವಾನಿಸುತ್ತೇನೆ. ನಮ್ಮ ಹಿರಿಯರಾಗಿರುವ ಜಗದೀಶ್ ಶೆಟ್ಟರ್ ರವರ ಸಲಹೆಯನ್ನು ಕೂಡ ಪಡೆಯುತ್ತೇನೆ. ಅವರ ಸಲಹೆಯನ್ನು ಪಡೆದು ಅಸಂಘಟಿತ ಕಾರ್ಮಿಕರ ಬಗ್ಗೆ ಏನು ತೀರ್ಮಾನ ತೆಗೆದುಕೊಳ್ಳಬೇಕೊ ಅದನ್ನು ನಾವು ತೆಗೆದುಕೊಳ್ಳುತ್ತೇವೆ.

ಪ್ರಶ್ನೆ ಸಂಖ್ಯೆ: 66 (1475) ಶ್ರೀ ಎ.ಎಸ್. ನಡಹಳ್ಳಿ (ದೇವರಹಿಪ್ಪರಗಿ)

(ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಉಪನೋಂದಣಾಧಿಕಾರಿಗಳ ಕಛೇರಿ ಸ್ಥಳಾಂತರ

67 (1479); ಶ್ರೀ ವಿಜಯ ಕುಮಾರ್ ಬಿ.ಎನ್. (ಜಯನಗರ)

ಅ) ಜಯನಗರ 4ನೇ ಹಂತದಲ್ಲಿರುವ ಉಪ ನೋಂದಣಾಧಿಕಾರಿಗಳ ಕಛೇರಿಯನ್ನು ಜಯನಗರ ವಾಣಿಜ್ಯ ಸಂಕೀರ್ಣ ಕಟ್ಟಡಕ್ಕೆ ಸ್ಥಳಾಂತರಿಸಲು ಸರ್ಕಾರ ನಿರ್ಧರಿಸಿದೆಯೇ; ಹಾಗಿದ್ದಲ್ಲಿ ಯಾವಾಗ ನಿರ್ಧಾರ ಕೈಗೊಳ್ಳಲಾಯಿತು;

ಆ) ಹಾಗಿದ್ದಲ್ಲಿ, ಇದುವರೆಗೂ ಉಪ ನೋಂದಣಾಧಿಕಾರಿಗಳ ಕಛೇರಿಯನ್ನು ಸ್ಥಳಾಂತರ ಮಾಡದಿರಲು ಕಾರಣವೇನು;

ಇ) ಯಾವಾಗ ಈ ಕಛೇರಿಯನ್ನು ಸ್ಥಳಾಂತರಿಸಲಾಗುವುದು; ಈ ದಿಶೆಯಲ್ಲಿ ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮಗಳೇನು?

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಹೌದು.

ಸರ್ಕಾರದ ಆದೇಶ ಸಂಖ್ಯೆ: ಕಂಇ 13 ಮುನೋಸ 2015 ದಿನಾಂಕ: 06.02.2015 ರಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ.

ಆ) ಆಡಳಿತಾತ್ಮಕ ಕಾರಣ.

ಇ) ಸರ್ಕಾರ ಆದೇಶ ಹೊರಡಿಸಿದ್ದು, ಶೀಘ್ರದಲ್ಲಿಯೇ ಸ್ಥಳಾಂತರಿಸಲಾಗುವುದು.

ಶ್ರೀ ಬಿ.ಎನ್. ವಿಜಯ ಕುಮಾರ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ನನ್ನ ನಾಲ್ಕು ವರ್ಷದ ಹೋರಾಟದ ಫಲದಿಂದ ಈ ಒಂದು ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ನನ್ನ ಎರಡನೆ ಪ್ರಶ್ನೆಗೆ ಆಡಳಿತಾತ್ಮಕ ಕಾರಣ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಇದು ನಿಜಕ್ಕೂ ಆಡಳಿತಾತ್ಮಕ ಕಾರಣವಾಗಿಲ್ಲ. ಅಲ್ಲಿನ ಬ್ರೋಕರ್‌ಗಳ ಪ್ರಭಾವದಿಂದ ಅಲ್ಲಿರುವ ಸಬ್‌ರಿಜಿಸ್ಟ್ರಾರ್‌ರವರು ಇಷ್ಟು ದಿವಸ ಡಿಲೇ ಮಾಡಿದ್ದಾರೆ. ಅಲ್ಲಿ ಮಹಾನಗರ ಪಾಲಿಕೆಯ ಸಂಕೀರ್ಣ ಇದ್ದು, ಅಲ್ಲಿಗೆ ಶಿಫ್ಟ್ ಮಾಡುವುದಕ್ಕೆ ಎಲ್ಲಾ ರೀತಿಯ ಸೌಕರ್ಯ ಸಹ ಅಲ್ಲಿದೆ. ಆದ್ದರಿಂದ, ಅಲ್ಲಿಗೆ ತಕ್ಷಣ ಶಿಫ್ಟ್ ಮಾಡಬೇಕೆಂದು ನನ್ನದು ಆಗ್ರಹವಾಗಿದೆ. ನನ್ನ ಮೂರನೇ ಪ್ರಶ್ನೆಗೆ ಶೀಘ್ರದಲ್ಲಿಯೇ ಸ್ಥಳಾಂತರಿಸಲಾಗುವುದೆಂದು ಉತ್ತರ ಕೊಟ್ಟಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಮಾಡುವುದಕ್ಕೆ ಆಗಿಲ್ಲ. ಆದ್ದರಿಂದ, ಶೀಘ್ರವೆಂದರೆ, 2, 3, 6 ತಿಂಗಳು ಅಥವಾ 4 ವರ್ಷವೇ

ಎಂದು ಹೇಳಬೇಕು. ಅಂದರೆ, ಈ ಬಗ್ಗೆ ಸರಿಯಾಗಿ ಹೇಳಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಈ ವಿಷಯದ ಬಗ್ಗೆ ಮಾನ್ಯ ಸದಸ್ಯರು ನನ್ನ ಹತ್ತಿರ ಪ್ರಸ್ತಾಪ ಮಾಡಿದ್ದಾರೆ. ಕಳೆದ ನಾಲ್ಕು ವರ್ಷದಿಂದ ಆಗಿಲ್ಲವೆಂದು ಹೇಳಿದ್ದಾರೆ. ಆದರೆ, ನಾವು ಬಂದು 1 ವರ್ಷ 8 ತಿಂಗಳಾಯಿತು. ನಾವು ಬಂದ ತಕ್ಷಣ ಈ ವಿಷಯದ ಬಗ್ಗೆ ಮಾನ್ಯ ವಿಜಯಕುಮಾರ್‌ರವರು ನನ್ನ ಹತ್ತಿರ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ನಾನು ಈಗಾಗಲೇ ಚರ್ಚೆ ಮಾಡಿದ್ದೇನೆ. ನಾವು ಇನ್ನು ಹೆಚ್ಚಿನ ಸಮಯ ತೆಗೆದುಕೊಳ್ಳುವುದಿಲ್ಲ. ಈಗ ಸ್ಥಳಾಂತರಕ್ಕೆ ನಿರ್ಧಾರ ತೆಗೆದುಕೊಳ್ಳಲಾಗಿದೆ. District Registrar and Sub Registrar ಕಛೇರಿ ಒಂದೇ ಕಡೆ ಬರುತ್ತಿದೆ. ಇದು ಜಯನಗರ ವಾಣಿಜ್ಯ ಸಂಕೀರ್ಣದ 4th floor ನಲ್ಲಿ ಆಗುತ್ತಿದೆ. ಅದು ತುಂಬಾ accommodative ಆಗಿದೆ. ಅಲ್ಲಿ District Registrar and Sub Registrar ಕಛೇರಿಯನ್ನು ಯಾವ ರೀತಿಯಾಗಿ ಮಾಡಬೇಕೆಂದು ನಿರ್ಧಾರ ತೆಗೆದುಕೊಳ್ಳಲಾಗಿದೆ. ಅಂದರೆ, ಅಲ್ಲಿ ಡ್ಯಾಕ್ಯುಮೆಂಟ್ಸ್‌ನ್ನು ಯಾವ ರೀತಿಯಾಗಿ ಇಟ್ಟುಕೊಳ್ಳಬೇಕೆಂದು ಹಾಗೂ ಬೇರೆ ಬೇರೆ ಕೆಲಸಗಳ ಬಗ್ಗೆ ಯಾವ ರೀತಿಯಾಗಿ ಇಟ್ಟುಕೊಳ್ಳಬೇಕೆಂದು ಹಾಗೂ ಬೇರೆ ಬೇರೆ ಕೆಲಸಗಳ ಬಗ್ಗೆ ಯಾವ ರೀತಿಯಾಗಿ ಮಾಡಬೇಕೆಂದು ಹೇಳಲಾಗಿದೆ. ಆದ್ದರಿಂದ, ಇದಕ್ಕೆ ಸಮಯ ಹೆಚ್ಚಿಗೆ ಬೇಕಾಗಿಲ್ಲ. ಏಕೆಂದರೆ, ಈಗಾಗಲೇ ಅಲ್ಲಿ ಕೊಠಡಿಯನ್ನು ತೆಗೆದುಕೊಂಡು ಆಗಿದೆ. ಮೂರ್ನಾಲ್ಕು ತಿಂಗಳು ಅಲ್ಲದಿದ್ದರೂ ಆದಷ್ಟು ಬೇಗ ಮಾಡಲಾಗುತ್ತದೆ. ಏಕೆಂದರೆ, ಅದಕ್ಕೆ ಈಗಾಗಲೇ ಆಡಳಿತಾತ್ಮಕ ಮಂಜೂರಾತಿ ಕೊಟ್ಟಾಗಿದ್ದು, ಅವೆಲ್ಲವನ್ನು ರೆಡಿ ಮಾಡುವುದಕ್ಕೆ ಕೆಲಸ ಪ್ರಾರಂಭವಾಗುತ್ತಿದೆ. ಮತ್ತೊಮ್ಮೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು IGR ರವರಿಗೆ ಹೇಳಿ ಆದಷ್ಟು ಬೇಗ ಮಾಡಿಸಿಕೊಡುತ್ತೇನೆ. ಸಮಯ ಎರಡು–ಮೂರು ತಿಂಗಳು ಬೇಡ. ಅದಕ್ಕಿಂತ ಮೊದಲೇ ಕಾರ್ಯ ಪ್ರಾರಂಭ ಮಾಡುವ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ.

ಅಧ್ಯಕ್ಷರು:– ಆಯಿತು. ಮಾನ್ಯ ಅರಬೈಲ್ ಶಿವರಾಮ್ ಹೆಬ್ಬಾರ್‌ವರೇ, ನಿಮ್ಮ ಪ್ರಶ್ನೆ ವರ್ಗಾವಣೆ ಆಗಿದೆ.

ಅರ್ಕಾವತಿ ನದಿ ಪುನಃಶ್ಚೇತನ ಕಾಮಗಾರಿ

69 (1505); ಶ್ರೀ ವಿಶ್ವನಾಥ್ ಎಸ್.ಆರ್.

ಅ) ಅರ್ಕಾವತಿ ನದಿ ಪುನಶ್ಚೇತನ ಕಾಮಗಾರಿ ಎಷ್ಟು ಪ್ರಮಾಣದಲ್ಲಿ ಪೂರ್ಣಗೊಂಡಿದೆ; ಇದಕ್ಕಾಗಿ ತಗಲಿರುವ ಅಂದಾಜು ವೆಚ್ಚವೆಷ್ಟು;

ಆ) ಹಾಗಿದ್ದಲ್ಲಿ, ಇನ್ನೂ ಬಾಕಿ ಇರುವ ಕಾಮಗಾರಿಗಳೆಷ್ಟು; ಇದನ್ನು ಯಾವಾಗ ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು)

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲ ಸಂಪನ್ಮೂಲ ಸಚಿವರು)

ಅ) ಅರ್ಕಾವತಿ ನದಿ ಪುನಶ್ಚೇತನ ಕಾಮಗಾರಿಯನ್ನು ಒಟ್ಟು 3 ಹಂತಗಳಲ್ಲಿ ಕೈಗೊಳ್ಳಲಾಗಿದೆ. ಕಾಮಗಾರಿಯ ಪ್ರಸ್ತುತ ಹಂತ ಮತ್ತು ವೆಚ್ಚದ ವಿವರಗಳು ಈ ಕೆಳಕಂಡಂತಿದೆ:

(1) ನಂದಿಬೆಟ್ಟದ ಹೆಸರಘಟ್ಟದ ಜಲಾಶಯದವರೆಗಿನ ಹೆಸರಘಟ್ಟ ಉಪ ಜಲಾನಯನದಲ್ಲಿ ₹ 9.95 ಕೋಟಿಗಳ (ಪ್ಯಾಕೇಜ್–1) ಸರಣಿ ಕೆರೆಗಳ ಮುಖಾಂತರ ಹರಿಯುವ ಹಳ್ಳ ಮತ್ತು ಉಪಹಳ್ಳಗಳು ಒಟ್ಟು 476.51 ಕಿ.ಮೀ. ಉದ್ದವಿದ್ದು, ಇದರಲ್ಲಿ ಈವರೆಗೂ 405 ಕಿ.ಮೀ. ಉದ್ದದ ಪುನಶ್ಚೇತನ ಕಾಮಗಾರಿ ಪೂರ್ಣಗೊಂಡಿದ್ದು (ಶೇಕಡ 85%) ಇದುವರೆವಿಗೂ ₹ 915.15 ಲಕ್ಷ ವೆಚ್ಚವಾಗಿರುತ್ತದೆ.

(2) ಕುಮುದ್ವತಿ ನದಿಯ ಉಗಮ ಸ್ಥಾನದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗಿನ ಕುಮುದ್ವತಿ ಉಪ ಜಲಾನಯನ ₹ 8.06 ಕೋಟಿಗಳ (ಪ್ಯಾಕೇಜ್–2) ಸರಣಿ ಕೆರೆಗಳ ಮುಖಾಂತರ ಹರಿಯುವ ಹಳ್ಳ ಮತ್ತು ಉಪಹಳ್ಳ